ಓ. ಎಸ್. ನಂಬರ:-6/2023

ಪಿ.ಡಬ್ಲೂ-:-1 : ಸುಜಾತಾ ಗಂಡ ಪ್ರಭಾಕರ ಬೀಸ್ಲೆ

ದಿನಾಂಕ:- 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ ಎ ಪಿ ವಕೀಲರಿಂದ.

ನನ್ನ ತಂದೆಯ ಹೆಸರು ನಿಂಗೊಡಪ್ಪ ಆಗಿರುತ್ತದೆ. ನನ್ನ ತಾಯಿಯ ಹೆಸರು ಕಸ್ತೂರಿ ಆಗಿರುತ್ತದೆ. ನನ್ನ ತಂದೆ-ತಾಯಿಯವರು ಈಗ ಮೃತರಾಗಿರುತ್ತಾರೆ. ನನ್ನ ತಂದೆ ಮೊದಲು ಮೃತರಾಗಿರುತ್ತಾರೆ. ನನ್ನ ತಂದೆ ಅಪಘಾತವಾಗಿ ೩ವರ್ಷಗಳ ಹಿಂದೆ ಅಕ್ಟೋಬರ್- ಮಾಹೆಯಲ್ಲಿ ಮೃತರಾಗಿರುತ್ತಾರೆ. ನನ್ನ ತಾಯಿ ಅದೆ ವರ್ಷದ ಡಿಸೆಂಬರ್ ಮಾಹೆಯಲ್ಲಿ ೩ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ತಾಯಿಯನ್ನು ನನ್ನ ಸಹೋದರನಾದ ೧ನೇ ಪ್ರತಿವಾದಿ ಕರೆದುಕೊಂಡು ಬೆಂಗಳೂರಿಗೆ ಹೋಗಿದ್ದರು, ಅಲ್ಲಿ ಅವರಿಗೆ ಊಟ ಕೊಟ್ಟಿರುವುದಿಲ್ಲ ಆದ್ದರಿಂದ ಅವರು ಅನಾರೋಗ್ಯದಿಂದ ಮೃತರಾಗಿರುತ್ತಾರೆ. ನನ್ನ ಸಹೋದರ ನನ್ನ ತಾಯಿಯನ್ನು ಚೆನ್ನಾಗಿ ಆರೈಕೆ ಮಾಡಿದ್ದರೂ ಸಹ ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೨. ನಮ್ಮ ತಂದೆ ಮೃತರಾದಾಗ ನನ್ನ ಸಹೋದರನಾದ ೧ನೇ ಪ್ರತಿವಾದಿ ಕೂಡಾ ಇದ್ದರು. ನಮ್ಮ ತಂದೆಗೆ ನಾನು, ಅರವಿಂದ, ಮಂಜುನಾಥ ಮತ್ತು ಮಲ್ಲಿಕಾರ್ಜುನ ಎಂಬ ೪ ಜನ ಮಕ್ಕಳು ಇರುತ್ತೇವೆ. ನನ್ನ ಸಹೋದರನಾದ ಮಂಜುನಾಥನು ಮೃತನಾಗಿರುತ್ತಾನೆ. ಸದರಿ

ಮಂಜುನಾಥರವರಿಗೆ ಮದುವೆ ಆಗಿರಲಿಲ್ಲ. ನನ್ನ ಸಹೋದರ ಮಂಜುನಾಥ ಸ್ಟೇಷನರಿ ಅಂಗಡಿ ಇಟ್ಟುಕೊಂಡಿದ್ದರು. ನನ್ನ ಸಹೋದರರಾದ ಅರವಿಂದ್ ಮತ್ತು ಮಲ್ಲಿಕಾರ್ಜುನರವರು ಸಾಫ್ಟವೇರ್ ಇಂಜಿನೀಯರ್ಸ ಆಗಿರುತ್ತಾರೆ. ಮಲ್ಲಿಕಾರ್ಜುನರವರು ಅಮೇರಿಕಾದಲ್ಲಿ ಮತ್ತು ಅರವಿಂದರವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ನನ್ನ ಸಹೋದರ ಅರವಿಂದ ಕೂಡಾ ಇದ್ದ ಎಂದರೆ ಸರಿ. ಸಾಕ್ಷಿಯು ಅವರು ೧ ರಿಂದ ೧ ವರೆ ವರ್ಷ ಅಲ್ಲಿ ಇದ್ದರು ಎನ್ನುತ್ತಾರೆ.

೩. ನನ್ನ ಮದುವೆ ೧೯೯೮ ರಲ್ಲಿ ಆಗಿರುತ್ತದೆ. ನನ್ನ ಗಂಡನ ಹೆಸರು ಪ್ರಭಾಕರ ಆಗಿರುತ್ತದೆ. ನನ್ನನ್ನು ಆಳಂದ ತಾಲೂಕಿನ ಹೆಬ್ಬಳಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು. ನನ್ನ ಗಂಡ ಒಕ್ಕಲುತನ ಮಾಡುತ್ತಾರೆ. ನನ್ನ ಗಂಡ ಈಗ ನನ್ನ ಮೃತ ಸಹೋದರನಾದ ಮಂಜುನಾಥನ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದಾರೆ. ಈಗ ನಾನು ಇರುವ ಮನೆಯಲ್ಲಿ ಮನೆ ಮತ್ತು ಅಂಗಡಿ ಸಂಕೀರ್ಣ ಇರುತ್ತದೆ ಎಂದರೆ ಸರಿ. ಮನೆ ಮತ್ತು ಅಂಗಡಿಗಳು ಬೇರೆ-ಬೇರೆ ಕಟ್ಟಡದಲ್ಲಿ ಇದ್ದು, ಸದರಿ ಕಟ್ಟಡಗಳ ಮದ್ಯ ಸಂದಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಅವುಗಳು ಒಂದೆ ಪ್ಲಾಟಿನಲ್ಲಿ ಇರುತ್ತವೆ ಎನ್ನುತ್ತಾರೆ. ೨ ಪ್ಲಾಟಗಳನ್ನು ಸೇರಿಸಿ ಒಂದು ಪ್ಲಾಟ ಮಾಡಲಾಗಿದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ನಮ್ಮ ತಂದೆಯೆ ಖರೀದಿಸಿದ್ದು, ನಮ್ಮ ತಂದೆಯೆ ಅವುಗಳಿಗೆ ತೆರಿಗೆ ಕಟ್ಟಿರುತ್ತಾರೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದವು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಹಿರಿಯರ ಆಸ್ತಿಗಳನ್ನು ಮಾರಿ, ಇವುಗಳನ್ನು ಖರೀದಿಸಿರುತ್ತಾರೆ ಎನ್ನುತ್ತಾರೆ. ನಮ್ಮ ತಂದೆ ಮೊದಲು ಯಾದಗಿರಿಯಲ್ಲಿ

ಇದ್ದರು. ನಮ್ಮ ಅಜ್ಜನ ಆಸ್ತಿಯನ್ನು ನಮ್ಮ ತಂದೆ ಸುಮಾರು ೩೦-೩೦ ವರ್ಷಗಳ ಹಿಂದೆ ನಾವು ಚಿಕ್ಕವರಿದ್ದಾಗ ಮಾರಿರುತ್ತಾರೆ. ಅವು ಇಂಡಿ ತಾಲೂಕಿನ ಹಲಸಂಗಿಯಲ್ಲಿ ಇದ್ದವು. ಸದರಿ ಆಸ್ತಿಗಳ ವಿವರ ಹೇಳಲು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಮಾರಾಟ ಆದ ಕುರಿತು ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

೪. ನಮ್ಮ ತಂದೆ ಆಸ್ತಿ ಖರೀದಿ ಮಾಡಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ನನ್ನ ತಂದೆ ಆಸ್ತಿಗಳನ್ನು ಖರೀದಿಸಿದ ಕುರಿತು ತೋರಿಸಲು ಯಾವುದೆ ಖರೀದಿ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಆಸ್ತಿಗಳು ಯಾರು ಖರೀದಿ ಮಾಡಿದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ನನ್ನ ತಂದೆ ನನ್ನ ಮೃತ ತಮ್ಮನಾದ ಮಂಜುನಾಥನ ಹೆಸರಿನಲ್ಲಿ ಆಸ್ತಿ ಮಾಡಿದ್ದರು ನಂತರ ನಮ್ಮ ತಂದೆ ಅದನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದರು ಎನ್ನುತ್ತಾರೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಆ ಕುರಿತು ಯಾವುದೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮದುವೆ ಅಫಜಲಪೂರದಲ್ಲಿಯೆ ಮನೆಯ ಮುಂದೆಯೆ ಆಗಿರುತ್ತದೆ. ನನ್ನ ತಂದೆ ಮತ್ತು ನನ್ನ ತಾಯಿ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಬೇರೆ-ಬೇರೆಯಾಗಿ ವಾಸ ಇದ್ದರು ಎಂದರೆ ಸರಿಯಲ್ಲ.

೫. ನಾನು ೨೦೦೮ ರಲ್ಲಿ ನನ್ನ ತಮ್ಮನಾದ ಮಂಜುನಾಥರವರು ಮೃತರಾದ ನಂತರ ಅಫಜಲಪೂರ ಪಟ್ಟಣಕ್ಕೆ ಬಂದು ವಾಸ ಇರುತ್ತೇನೆ. ಸಾಕ್ಷಿಯು ಅದಕ್ಕೂ ಮೊದಲು ಕೂಡಾ

ನಾನು ಬಂದು-ಹೋಗಿ ಮಾಡಿ, ನಮ್ಮ ತಂದೆ-ತಾಯಿರವರನ್ನು ನೋಡಿಕೊಂಡಿರುತ್ತೇನೆ ಎನ್ನುತ್ತಾರೆ. ನನ್ನ ಗಂಡನಿಗೆ ನೌಕರಿ ಇಲ್ಲದ ಕಾರಣ ನನ್ನ ತಂದೆ ನನ್ನ ಗಂಡನನ್ನು ಮತ್ತು ನನ್ನನ್ನು ತಮ್ಮ ಹತ್ತಿರ ತಂದು ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆ ತಮ್ಮನ್ನು ನೋಡಿಕೊಳ್ಳಲು ನಮ್ಮನ್ನು ತಂದು ಇಟ್ಟುಕೊಂಡಿದ್ದರು ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.